ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಯಾರಾದರೂ ಉತ್ತರ ಹೇಳಬಹುದು, ಕಷ್ಟದ ಉತ್ತರವೇನೂ ಅಲ್ಲ. ಬಹಳ ಸಿಂಪಲ್.

ಅಧ್ಯಕ್ಷರು: ಆಯಿತು, ಮಂತ್ರಿಗಳು ಬಂದಾಗ ಉತ್ತರ ಕೊಡಿಸುತ್ತೇನೆ.

ಸಾರಿಗೆ ಬಸ್ಸುಗಳ ದುಸ್ಥಿತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 21: ಶ್ರೀ ನರಸಿಂಹಸ್ವಾಮಿ ಜಿ. (ದೊಡ್ಡಬಳ್ಳಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಪ್ರಶ್ನೆ : ಅ) ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಸುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರತಿ ನಿತ್ಯವೂ ಕೆಟ್ಟುನಿಂತಿರುವ ಬಸ್ಸುಗಳಿಂದ ಪ್ರಯಾಣಿಕರ ಸ್ಥಿತಿ ಅಸ್ತವ್ಯಸ್ತವಾಗಿದ್ದು, ಇದರ ಉನ್ನತೀಕರಣಕ್ಕೆ ಸರ್ಕಾರ ಯಾವ ಕ್ರಮ ತೆಗೆದು ಕೊಂಡಿದೆ;

ಇ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು;

ಈ) ಅದರಲ್ಲಿ ಸುಸ್ಥಿತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು?

ಉತ್ತರ:

ಅ) ಇಲ್ಲ. ವಾಹನಗಳು ದು-ಸ್ಥಿತಿಯಲ್ಲಿರುವುದಿಲ್ಲ.

ಆ) ನಿಗಮದಲ್ಲಿರುವ ವಾಹನಗಳ ನಿರ್ವಹಣೆಗೆ ಸಂಬಂಧಿಸಿದಂತೆ ದಿನಿತ್ಯದ ವಾರದ ಹಾಗೂ ನಿಗದಿತ ಕಿ.ಮಿ. (Scheduled maintenance) ನಿರ್ವಹಣೆಯನ್ನು ಕ್ರಮ ಬದ್ಧವಾಗಿ ಮಾಡಲಾಗುತ್ತಿದೆ.

ಇ) 29.

ಈ) ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತದೆ.

ಶ್ರೀ ಜೆ. ನರಸಿಂಹಸ್ವಾಮಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಪ್ರದೇಶದಲ್ಲಿ ಕೆಲವು ಪ್ರದೇಶಗಳಿಗೆ ಬಸ್‌ಗಳನ್ನು ಕೇವಲ ಒಂದೊಂದೇ ಟ್ರಿಪ್‌ಗಳನ್ನು ಹಾಕಿದ್ದಾರೆ. ಬಹಳಷ್ಟು ಬಸ್‌ಗಳು ಕೆಟ್ಟುಹೋಗಿಬಿಡುತ್ತಿವೆ. ಎರಡು ದಿವಸಗಳಾದರು ಸರಿಪಡಿಸದೇ ಶಾಲಾ ಮಕ್ಕಳಿಗೆ ಶಾಲೆಗೂ ಹೋಗುವುದಕ್ಕೆ ಬಸ್ ವ್ಯವಸ್ಥೆ ಸರಿ ಇರುವುದಿಲ್ಲ. ಆದುದರಿಂದ ಸುಮಾರು 20,25 ವರ್ಷದ ಹಳೆ ಮಾಡೆಲ್ ಬಸ್ಗಳೇನಿವೆ ಅವುಗಳನ್ನೆಲ್ಲಾ ತಾವು ತೆಗೆದುಹಾಕಬೇಕು. ಸರ್ಕಾರದಲ್ಲಿ ಹೇಳಿದ ಹಾಗೆ 15 ವರ್ಷಗಳ ಮೇಲೆ ಯಾವುದೇ ವೆಹಿಕಲ್‌ಗಳನ್ನು ರಿನ್ಯೂವಲ್ ಮಾಡಬಾರದು ಎಂದು ನಿಯಮವಿದೆ. ಅದರಲ್ಲಿಯೂ ಸಾರ್ವಜನಿಕರನ್ನು ಕರೆದುಕೊಂಡು ಹೋಗುವಂಥ ಬಸ್‌ಗಳು ಇಂಥದ್ದು ಇರಬಾರದು. ನಾನು ಒಂದು ಸಾರಿ ಒಂದು ಗ್ರಾಮಕ್ಕೆ ಹೋಗುತ್ತಿದ್ದಾಗ ಇಂದು ಬಸ್ ಲೈಟ್‌ಗಳನ್ನು ಹಾಕಿಕೊಂಡು ಬರುತ್ತಿತ್ತು. ಆ ಬಸ್‌ನ ಛಾಸಿ ಹಿಂದುಗಡೆಯಿಂದ ಬಂದು ನಮ್ಮ ಪಕ್ಕಕ್ಕೆ ಬರುತ್ತಿತ್ತು. ಅಲ್ಲಿದ್ದ ಜನಗಳು ಪಕ್ಕಕ್ಕೆ ಹೋಗಿ, ಪಕ್ಕಕ್ಕೆ ಹೋಗಿ ಎಂದು ಹೇಳಿದಾಗ ನಾವು ಪಕ್ಕಕ್ಕೆ ಹೋದೆವು. ಅವೊತ್ತು ನಾವು ಪಕ್ಕಕ್ಕೆ ಹೋಗದಿದ್ದರೆ ಆ್ಯಕ್ಸಿಡೆಂಟ್ ಆಗುತ್ತಿತ್ತು. ಈ ರೀತಿಯ ಬಸ್‌ಗಳೂ ಕೂಡ ಇವೆ. ಬಸ್ಸು ಮುಂದುಗಡೆ ಕಾಣುತ್ತಿತ್ತು. ನಾವು ಪಕ್ಕಕ್ಕೆ ತೆಗೆದುಕೊಳ್ಳದೇ ಹೋದರೆ accident ಆಗಬಹುದು. ಇಂತಹ ಬಸ್ಸುಗಳು ಇವೆ. ಆದುದರಿಂದ ಮಾನ್ಯ ಸಾರಿಗೆ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನನ್ನ ತಾಲ್ಲೂಕಿನಲ್ಲಿ ಬಹಳ ಹಳೆಯ ಬಸ್ಸುಗಳು ಇವೆ. ಸರಿಯಾದ ಮಾಹಿತಿಯನ್ನು ತೆಗೆದುಕೊಂಡು ಹೊಸ ಬಸ್ಸುಗಳನ್ನು ಹಾಕಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ಅವರು ತಿಳಿಸಿದಂತೆ ಎಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿದೆ ಎನ್ನುವ ಪಟ್ಟಿಯನ್ನು ಕಳುಹಿಸಿಕೊಟ್ಟರೆ ತಕ್ಷಣ ಅದನ್ನು operate ಮಾಡುತ್ತೇವೆ. ಇವತ್ತು ಅವರು ಬಹಳ ದುಸ್ಥಿತಿಯಲ್ಲಿದೆ ಎಂದು ಏನು ಹೇಳಿದರು, KSRTC ಯಿಂದ ಬಹಳ ಉತ್ತಮವಾದಂತಹ ಬಸ್ಸುಗಳನ್ನು ಹಾಕುತ್ತಿದ್ದೇವೆ. ಎಂಟು ವರ್ಷದ ಬಸ್ಸುಗಳನ್ನು scrap ಮಾಡುತ್ತಿದ್ದೇವೆ. 25 ವರ್ಷದ ಬಸ್ಸುಗಳು

ನಮ್ಮಲ್ಲಿ ಈಗ ಓಡುತ್ತಿಲ್ಲ. ಆಕಸ್ಮಿಕವಾಗಿ ಒಂದೆರಡು ಏನಾದರೂ ಓಡುತ್ತಿದ್ದರೆ, ಆ ಡಿಪೋದಲ್ಲಿ ಅದನ್ನು ತಕ್ಷಣ ರದ್ದು ಮಾಡಿ ಹೊಸ ಸರ್ವೀಸ್ ಅನ್ನು ಕೊಡುತ್ತೇವೆ.

ಅಧ್ಯಕ್ಷರು: ಸಿದ್ದು ಸವದಿ ಪ್ರಶ್ನೆಗೆ ಉತ್ತರಿಸುವುದಕ್ಕೆ ಮಾನ್ಯ ಮಂತ್ರಿಗಳು ಇಲ್ಲ. ಶಂಕರಲಿಂಗೇಗೌಡ ಅವರು ಪ್ರಶ್ನೆ ಕೇಳಿ.

ಬೀದಿ ನಾಯಿಗಳ ಹಾವಳಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 23: ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್(ಚಾಮರಾಜ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಪ್ರಶ್ನೆ: 1. ಮೈಸೂರು ನಗರದಲ್ಲಿ ಎಷ್ಟು ಬೀದಿ ನಾಯಿಗಳಿವೆ ಎಂಬುದನ್ನು ಅಂದಾಜಿಸಲಾಗಿದೆ?

2. ಬೀದಿ ನಾಯಿಗಳಿಂದ ತೊಂದರೆಗೊಳಗಾದವರೆಷ್ಟು? (ಇತ್ತೀಚಿನ ಒಂದು ವರ್ಷದ ವಿವರ ನೀಡುವುದು)

3. ಬೀದಿ ನಾಯಿಗಳ ಹಾವಳಿ ತಡೆಗೆ ಯಾವ ಯಾವ ಕ್ರಮ ವಹಿಸಿದೆ.

4. ಕಳೆದ ಒಂದು ವರ್ಷದಿಂದೀಚೆಗೆ ಎಷ್ಟು ಬೀದಿ ನಾಯಿಗಳನ್ನು ಹಿಡಿಯಲಾಗಿದೆ. ಬಾಕಿ ಎಷ್ಟು ಬೀದಿ ನಾಯಿಗಳನ್ನು ಹಿಡಿಯಬೇಕಿದೆ. (ವಿವರ ನೀಡುವುದು)

ಉತ್ತರ : ಹೆಚ್.ಡಿ.ಕುಮಾರ ಸ್ವಾಮಿ

1) ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 8000 ಬೀದಿ ನಾಯಿಗಳಿರುತ್ತವೆ ಎಂದು ಅಂದಾಜು ಮಾಡಲಾಗಿದೆ.